# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :: | 340 |
| ಸದಸ್ಯರ ಹೆಸರು | :: | ಶ್ರೀ ಎಸ್.ಎಲ್. ಬೋಜೆಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | :: | 06.03.2020 |
| ಉತ್ತರಿಸುವ ಸಚಿವರು | :: | ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ ರಡಿಯ ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು ಇಲ್ಲಿ All India Coordinated Research Project (AICRP) ನಲ್ಲಿ ತಾತ್ಕಾಲಿಕ ಸಿಬ್ಬಂದಿಗಳಿಗೆ ಆಕ್ರಮವಾಗಿ ಸಂಪೂರ್ಣ ವೇತನ ಮತ್ತು ವಾರ್ಷಿಕ ಬಡ್ತಿ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ಮಂಗಳೂರು ಮೀನುಗಾರಿಕೆ ಮಹಾವಿದ್ಯಾಲಯದಲ್ಲಿ ICAR ಪ್ರಾಯೋಜಿತ All India Coordinated Research Project (AICRP) ನಲ್ಲಿ ICAR ಮತ್ತು ವಿಶ್ವವಿದ್ಯಾಲಯದ ಒಡಂಬಡಿಕೆ ಪ್ರಕಾರ ತಾತ್ಕಾಲಿಕವಾಗಿ ನೇಮಿಸಿಕೊಂಡಿರುವ ಸಿಬ್ಬಂದಿಗಳಿಗೆ ಸಂಚಿತ ವೇತನ ಮತ್ತು ವಾರ್ಷಿಕ ಬಡ್ತಿ ನೀಡಲಾಗುತ್ತಿದೆ. |
| ಆ) | (AICRP ಯೋಜನೆಯಡಿ ತಾತ್ಕಾಲಿಕ ವಿಜ್ಞಾನಿ (Scientists) ಗಳಿಗೆ ಮಾಹೆಯಾನ ಏಕೀಕೃತ ವೇತನ ರೂ. 57.400-00 ಗಳನ್ನು 179 ದಿನಗಳಿಗೆ ಮಾತ್ರ ಸೀಮಿತಗೊಳಿಸಿ ನೀಡಲಾಗುತ್ತಿಲ್ಲದಿರುವುದಕ್ಕೆ ಕಾರಣಗಳೇನು: | ಸಂಶೋಧನಾ ಯೋಜನೆಯ ಅನುಷ್ಠಾನದ ಒಡಂಬಡಿಕೆ ಪ್ರಕಾರ ಸಿಬ್ಬಂದಿಗಳಿಗೆ (pay) ವೇತನ ಹಾಗೂ ತತ್ಸಂಬಂಧ ಭತ್ಯೆ ಎರಡನ್ನು ನೀಡಲಾಗುತ್ತಿದೆ. ಒಂಡಂಬಡಿಕೆಯಲ್ಲಿ ವಿಜ್ಞಾನಿಗಳನ್ನು 179 ದಿನಗಳಿಗೆ ಮಾತ್ರ ಸೀಮಿತಗೊಳಿಸಿ ನೇಮಿಸಿಕೊಳ್ಳುವ ಷರತ್ತನ್ನು ವಿಧಿಸಲಾಗಿರುವುದಿಲ್ಲ. |
| ಇ) | ಈ Project ನಡಿ ಎಷ್ಟು ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಎಷ್ಟು ದಿನಗಳಿಗೆ ನೇಮಿಸಿಕೊಳ್ಳಲಾಗಿದೆ ಹಾಗೂ ಅವರಿಗೆ ಎಷ್ಟು ಸಂಬಳ ನೀಡಲಾಗುತ್ತಿದೆ. | ಐಸಿಎಆರ್ ಯೋಜನೆ ಅಡಿಯಲ್ಲಿ ಒಟ್ಟು 07 ಸಿಬ್ಬಂದಿಗಳನ್ನು ಸಮವ್ಯಾಪಕ (co-terminus) ಅಡಿಯಲ್ಲಿ 2010 ನೇ ಸಾಲಿನಿಂದ ನೇಮಿಸಿಕೊಳ್ಳುತ್ತಾ ಬರಲಾಗುತ್ತಿದೆ. ಒಡಂಬಡಿಕೆ ಪ್ರಕಾರ 07 ಸಿಬ್ಬಂದಿಗಳಿಗೆ ತಿಂಗಳಿಗೆ ಒಟ್ಟು ಮೊತ್ತ ರೂ. 4,94,983/- ಗಳನ್ನು ನೀಡಲಾಗುತ್ತಿದೆ. |
| ಈ) | ಸದರಿ Project ನಲ್ಲಿ ಸಿಬ್ಬಂದಿಗಳನ್ನು 179 ದಿನಗಳಿಗೆ ನೇಮಕ ಮಾಡದೇ ಹಾಗೂ ಅವರಿಗೆ ಏಕೀಕೃತ ವೇತನವನ್ನು ನೀಡದೆ ಖಾಯಂ ಸಿಬ್ಬಂದಿಗಳಿಗೆ ನೀಡುವಂತೆ ಹುದ್ದೆಯ ಪೂರ್ಣ ಮೂಲ ವೇತನ ವಾರ್ಷಿಕ ವೇತನ ಬಡ್ತಿ ಮನೆ ಬಾಡಿಗೆ ಭತ್ಯೆ ಹಾಗೂ ಇತರೆ ಸವಲತ್ತುಗಳನ್ನು ನೀಡಲಾಗುತ್ತಿರುವುದರಿಂದ ಸಾರ್ವಜನಿಕ ಹಣವು ಪೋಲು ಆಗುತ್ತಿದ್ದು ಅಂತಹವರುಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ. | ಒಡಂಬಡಿಕೆ ಪ್ರಕಾರ ಸಿಬ್ಬಂದಿಗಳಿಗೆ ವೇತನ ಹಾಗೂ ತತ್ಸಬಂಧದ ಭತ್ಯೆ ನೀಡಲಾಗುತ್ತಿದೆ. ಒಡಂಬಡಿಕೆ ಪ್ರಕಾರ 179 ದಿನಗಳಿಗೆ ಸೀಮಿತಗೊಳಿಸಿ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ಯಾವುದೇ ರೀತಿಯ ಷರತ್ತು ವಿಧಿಸಿಲ್ಲ. ICAR ನಿಂದ ಶೇಕಡಾ 75% ಮತ್ತು ವಿಶ್ವವಿದ್ಯಾಲಯದ ಶೇಕಡ 25% ರ ಅನುಪಾತದಲ್ಲಿ ಸಂಬಳ ಮತ್ತು ತತ್ಸಂಬಂಧ ಭತ್ಯೆಯನ್ನು ಹಾಗೂ ಇತರೆ ಸೌಲಭ್ಯಗಳನ್ನು ನೀಡಲಾಗುತ್ತಿದೆ. |

| | | |
|---|---|---|
| ಉ) | ಕಾಲೇಜಿಗೆ ಸಂಬಂದಿಸಿದ ವಿಭಾಗದಲ್ಲಿ (Fish Processing Technology) ಖಾಯಂ Associate Professor ನೌಕರರು ಇದ್ದರೂ ಸಹ ಈ ಯೋಜನೆ ಯಡಿ ತಾತ್ಕಾಲಿಕ (Senior Scientist Associate Professor Cadre) ನೌಕರರನ್ನು ನೇಮಕಾತಿ ಮಾಡಲು ಕಾರಣವೇನು ಈ ರೀತಿ Senior Scientist ನ್ನು ನೇಮಕಾತಿ ಮಾಡಿಕೊಳ್ಳಲು ಅವಕಾಶವಿದೆಯೇ: | ಮಹಾವಿದ್ಯಾಲಯದ ಒಬ್ಬ Associate Professor (ಡಾ.ಮಂಜನಾಯ್ಕ) AICRP ಯೋಜನೆಯಡಿಯಲ್ಲಿ ಕೆಲಸ ನಿರ್ವಹಿಸಲು ಅಸಮ್ಮತಿಯನ್ನು ಸೂಚಿಸಿರುತ್ತಾರೆ. ಇನ್ನೊಬ್ಬ Associate Professor ಈಗಾಗಲೇ ವಿಭಾಗದಲ್ಲಿನ ಶೈಕ್ಷಣಿಕ, ಸಂಶೋಧನಾ ಹಾಗೂ ವಿಸ್ತರಣಾ ಕೆಲಸದ ಹೊರೆ ಹೆಚ್ಚಾಗಿದ್ದು ಒಡಂಬಡಿಕೆಯ ಷರತ್ತಿನಂತೆ ಶೇಕಡ 75% ರಷ್ಟು ಸಮಯವನ್ನು ಯೋಜನೆಗೆ ಮೀಸಲಿಡಲು ಸಾಧ್ಯವಾಗಿಲ್ಲದ ಕಾರಣ ತಾತ್ಕಾಲಿಕವಾಗಿ Sr. Scientist ನ್ನು ನೇಮಿಸಿಕೊಳ್ಳಲಾಗಿದೆ. |
| ಊ) | ಈ ಯೋಜನೆಯ ಮುಖ್ಯಸ್ಥರು ಖಾಯಂ Associate Professor ಹುದ್ದೆಯಲ್ಲಿರುವ ಸಿಬ್ಬಂದಿ ಇರಬೇಕೆಂದು ನಿಯಮ ಇದ್ದರೂ ಸಹ ಶಿಕ್ಷಕೇತರ ವೃಂದಲ್ಲಿರುವ ವಿಶ್ವವಿದ್ಯಾಲಯದ ಹಣಕಾಸು ನಿಯಂತ್ರಣಾದಿಕಾರಿಗಳು ಸ್ವತ: ಯೋಜನೆಯ ಮುಖ್ಯಸ್ಥರಾಗಿ ಮುಂದುವರೆಯಲು ಕಾರಣವೇನು | ಯೋಜನೆಯಡಿ ತಾತ್ಕಾಲಿಕವಾಗಿ ನೇಮಕಗೊಂಡಿರುವ Sr.Scientist ಹುದ್ದೆಯು ಸಮವ್ಯಾಪಕ (Co-terminus) ಅಡಿಯಲ್ಲಿ ನೇಮಕ ಮಾಡಲಾಗಿದ್ದು ಹಣಕಾಸಿನ ವ್ಯವಹಾರಗಳ ಸುರಕ್ಷತೆ ಹಾಗೂ ಭದ್ರತೆಯ ಸಲುವಾಗಿ ಯೋಜನೆಯ ಪ್ರಾರಂಭದಿಂದ ಪ್ರಧಾನ ಸಂಶೋಧಕರಾಗಿದ್ದ ವಿಜ್ಞಾನಿಗೆ ಜವಾಬ್ದಾರಿಯನ್ನು ವಹಿಸಲಾಗಿದೆ. ಸದರಿ ಪ್ರಧಾನ ಸಂಶೋಧಕರು ಕಳೆದ 05 ತಿಂಗಳಿಂದಷ್ಟೇ ಪ್ರಭಾರಿ ಹಣಕಾಸು ನಿಯಂತ್ರಣಾಧಿಕಾರಿ ಎಂದು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕಾಗಿ ಯಾವುದೇ ಹೆಚ್ಚುವರಿ ಭತ್ಯೆ ನೀಡಲಾಗುತ್ತಿಲ್ಲ. |
| ಋ) | ಈ ಯೋಜನೆ ಯಾವ ವರ್ಷದಿಂದ ಚಾಲನೆಯಲ್ಲಿದೆ: ಬಿಡುಗಡೆ ಮತ್ತು ಖರ್ಚಾದ ಅನುದಾನದ ಸಂಪೂರ್ಣ ವಿವರ ಹಾಗೂ ಕೇಂದ್ರ ಮತ್ತು ರಾಜ್ಯದ ಪಾಲಿನ ಅನುದಾನ ಮಾಹಿತಿ ನೀಡುವುದು. | ಈ ಯೋಜನೆ 2010 ರಿಂದ ಚಾಲನೆಯಲ್ಲಿದ್ದು, ಬಿಡುಗಡೆ ಮತ್ತು ಖರ್ಚಾದ ಅನುದಾನದ ಸಂಪೂರ್ಣ ವಿವರ ಹಾಗೂ ಕೇಂದ್ರ ಮತ್ತು ರಾಜ್ಯದ ಪಾಲಿನ ಅನುದಾನದ ಮಾಹಿತಿಯನ್ನು 2010 ರಿಂದ 2019ರವರೆಗೆ ವರ್ಷಾನುಸಾರವಾಗಿ ನಡೆಸಲಾದ ಆಡಿಟ್ ಯುಟಿಲೈಜೈಶನ್ ಸರ್ಟಿಫೀಕೆಷನ್‌ನ (AUC- Audit Utilisation Certificate) ಮುಖೇನ ಸಲ್ಲಿಸಲಾಗಿದೆ (ಅನುಬಂಧ– 1 ರಲ್ಲಿ ಇರಿಸಲಾಗಿದೆ) |

**ಸಂಖ್ಯೆ: ಪಸಂಮೀ ಇ-89 ಪಅಸೇ 2020**

(ಪ್ರಭು ಬಿ. ಚವ್ಹಾಣ್)
**ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು**

# ಅನುಬಂಧ–1

| 2010 ರಿಂದ 2019 ರವರೆಗೆ ಅನುದಾನದ ಖರ್ಚು ಮತ್ತು ವಿವರ ಕೆಳಕಂಡಂತೆ ಇರುತ್ತದೆ. | | | | | |
|---|---|---|---|---|---|
| **Fund Utilization Details:** | | | | | |
| SL. No | YEAR | ICAR FUND (A) | EXPENDITURE ICAR Share (B) 75 % | EXPENDITURE STATE 25 % Share | UNUTILIZED REFUND (A-B) |
| 1. | **2009-10** | 16,50,000.00 | 2,91,513.00 | 97,171.00 | 13,58,487.00 |
| 2. | **2010-11** | 40,00,000.00 | 15,53,559.00 | 5,17,853.00 | 24,46,441.00 |
| 3. | **2011-12** | 19,92,000.00 | 19,17,325.50 | 6,39,108.50 | 74,674.50 |
| 4. | **2012-13** | 16,93,000.00 | 13,88,313.00 | 4,62,771.00 | 3,04,687.00 |
| 5. | **2013-14** | 33,25,000.00 | 14,05,714.00 | 4,68,571.00 | 19,19,286.00 |
| 6. | **2014-15** | 44,50,000.00 | 46,04,679.75 | 15,34,893.25 | -1,54,679.75 |
| 7. | **2015-16** | 57,80,000.00 | 42,31,304.25 | 14,10,434.75 | 15,48,695.75 |
| 8. | **2016-17** | 53,50,000.00 | 56,37,947.25 | 18,79,315.75 | -2,87,947.25 |
| | **Total** | **2,82,40,000.00** | **2,10,30,355.75** | **70,10,118.25** | **72,09,644.25** |

| SL. No. | YEAR | ICAR FUND (A) | EXPENDITURE (B) 75 % | EXPENDITURE STATE 25 % Share | UNUTILIZED FUND (A-B) |
|---|---|---|---|---|---|
| 9. | 2017-18 | 68,65,000.00 | 41,22,045.00 | 13,74,015.00 | 27,42,955.00 |
| 10. | 2018-19 | 63,58,432.00 | 52,17,561.75 | 17,39,187.25 | 11,40,870.25 |
| 11. | 2019-20 | 52,20,000.00 | 48,57,992.25 | 16,19,330.75 | 3,62,007.75 |
| | **Total** | **1,84,43,432.00** | **1,41,97,599.00** | **47,32,533.00** | **42,45,833.00** |

ಸಂಖ್ಯೆ: ಪಸಂಮೀಇ ಇ–89 ಪಅಸೇ 2020

(signature)

**ಸರ್ಕಾರದ ಅಧೀನ ಕಾರ್ಯದರ್ಶಿ**
**ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,**
**(ಪಶುಸಂಗೋಪನೆ)**